**OS.No.**13/2019
**ಡಿಡಬ್ಲ್ಯೂ:1**

**ದಿಃ 23-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈಎಂ ಆರ್ ವಾದಿಗಳ ಪರ ವಕೀಲರಿಂದ**

ವಿ ಎಚ್ ಶಿವರುದ್ರಪ್ಪ ತಂದೆ ಹಾಲಪ್ಪ ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಅವರೆಂದರೆ ಪಾರಮ್ಮ ಮತ್ತು ಗಂಗಮ್ಮ ಎಂದರೆ ಸರಿ. ಮೊದಲ ಹೆಂಡತಿ ಪಾರಮ್ಮರವರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಸದರಿ ಪಾರಮ್ಮರವರು ಮರಣ ಹೊಂದಿ ಬಹಳ ವರ್ಷಗಳಾಗಿವೆ ಎಂದರೆ ಸರಿ. 2 ನೇ ಹೆಂಡತಿ ಗಂಗಮ್ಮರವರಿಗೆ 8 ಜನ ಮಕ್ಕಳು ಎಂದರೆ ಸರಿ. ಸದರಿ ಎಂಟು ಜನ ಮಕ್ಕಳ ಪೈಕಿ ನಾನು ಮೊದಲನೇ ಮಗ ಎಂದರೆ ಸರಿ. ನನ್ನ ಸಹೋದರರೆಂದರೆ ಪ್ರತಿವಾದಿ ನಂ 3 ಮತ್ತು 4, ಯತೀಶ್, ಪರಮೇಶ್ವರಪ್ಪ, ಷಣ್ಮುಖಪ್ಪ, ಪ್ರತಿವಾದಿ ನಂ 7 ಮತ್ತು 2 ನೇ ವಾದಿ ಎಂದರೆ ಸರಿ. ನನ್ನ ತಂದೆ ವಿ ಎಚ್ ಶಿವರುದ್ರಪ್ಪರವರ ಜ ೀವಿತಾವಧಿಯಲ್ಲಿ ನಮ್ಮ ಕುಟುಂಬದಲ್ಲಿ ನೊಂದಾಯಿತ ವಿಭಾಗ ಪತ್ರ ಆಗಿಲ್ಲ. 2006-07 ನೇ ಸಾಲಿನಲ್ಲಿ ನನ್ನ ತಂದೆ ಮರಣ ಹೊಂದಿದ್ದಾರೆ. ವಡ್ನಾಳು ಗ್ರಾಮದ ಜಮೀನು ಆಸ್ತಿಗಳು ನಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿಯಲ್ಲ.

ದಾವಾ ಕ್ರಮ ಸಂಖ್ಯೆ 1 ರ ಅನುಸೂಚಿ ಆಸ್ತಿಗಳು ನಮ್ಮ ಕುಟುಂಬಕ್ಕೆ ಯಾರ ಹೆಸರಿಗೆ ಯಾರಿಂದ ಹೇಗೆ ಬಂದಿದ್ದವು ಎಂದು ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂಖ್ಯೆ 2 ರ ಅನುಸೂಚಿ ಆಸ್ತಿಯು ನನ್ನ ತಂದೆ ಕೊಂಡು ಕೊಂಡ ಮೂಲಕ ಬಂದಿರಬಹುದು. ದಾವಾ ಕ್ರಮ ಸಂಖ್ಯೆ 3 ರ ಅನುಸೂಚಿ ಆಸ್ತಿಯು ನನ್ನ ತಂದೆಯ ಹೆಸರಿಗೆ ಬಂದಿದೆ. ದಾವಾ ಕ್ರಮ ಸಂಖ್ಯೆ 4 ರ ಅನುಸೂಚಿ ಆಸ್ತಿಯಲ್ಲಿ ಕಾಣಿಸಿದ ಸರ್ವೆ 25/5ಬಿ ಆಸ್ತಿಯು ನನ್ನ ದತ್ತಕ ತಂದೆ ವಿ ಎಚ್ ಈಶ್ವರಪ್ಪ 1980 ರಲ್ಲಿ ಬಂದಿತ್ತು. ಸರ್ವೆ ನಂ 25/5ಎ ಆಸ್ತಿಯನ್ನು ಸಿದ್ದರಾಮಪ್ಪರವರಿಂದ ನಾನು ಕ್ರಯಕ್ಕೆ ಪಡೆದಿದ್ದೆ. ದಾವಾ ಕ್ರಮ ಸಂಖ್ಯೆ 4 ರ ಅನುಸೂಚಿ ಉಲ್ಲೇಖಿಸಿದ ಉಳಿದ ಆಸ್ತಿಗಳು ನಮ್ಮ ಮನೆತನಕ್ಕೆ ಯಾರಿಂದ ಹೇಗೆ ಬಂದಿದ್ದವು ಎನ್ನುವುದು ಮರೆತು ಹೋಗಿದೆ.

ದಾವಾ ಕ್ರಮ ಸಂಖ್ಯೆ 5 ರಿಂದ 9 ರ ಅನುಸೂಚಿ ಆಸ್ತಿಗಳು ನನ್ನ ತಂದೆ ಕ್ರಯಕ್ಕೆ ಪಡೆದ ಆಸ್ತಿಗಳು. ದಾವಾ ಕ್ರಮ ಸಂಖ್ಯೆ 10 ರ ಅನುಸೂಚಿ ಆಸ್ತಿಯು ನಾನು ಕ್ರಯಕ್ಕೆ ಪಡೆದ ಆಸ್ತಿ. ದಾವಾ ಕ್ರಮ ಸಂಖ್ಯೆ 1 ರ ಬಿ ಅನುಸೂಚಿ ವಾಹನ ಆಸ್ತಿಯು ನನ್ನ ಮಗ ವಿಶ್ವನಾಥರವರ ಹೆಸರಿನಲ್ಲಿದೆ. ದಾವಾ ಕ್ರಮ ಸಂಖ್ಯೆ 2 ಬ ಅನುಸೂಚಿ ಆಸ್ತಿಯು ನನ್ನ

ಹೆಸರಿಗೆ ಇತ್ತು. ಅದನ್ನು ಆಗಲೇ ಮಾರಾಟ ಮಾಡಲಾಗಿದೆ. ದಾವಾ ಕ್ರಮ ಸಂಖ್ಯೆ 3 ರ ಬ ಅನುಸೂಚಿ ಆಸ್ತಿಯಟುಲ್ಲಿ ಕಾಣಿಸಿದ ದ್ವಿ ಚಕ್ರ ವಾಹನಗಳು ನನ್ನ ಮತ್ತು ಪರಮೇಶ್ವರಪ್ಪರವರ ಹೆಸರಿಗೆ ತಲಾ ಒಂದು ದ್ವಿ ಚಕ್ರ ವಾಹನಗಳು ಇದ್ದವು ಎಂದರೆ ಸಾಕ್ಷಿ ಇತ್ತು ಮರೆತು ಹೋಗಿದೆ ಎಂದು ನುಡಿಯುತ್ತಾರೆ. ದಾವಾ ಕ್ರಮ ಸಂಖ್ಯೆ 4 ರಿಂದ 6 ಬ ಅನುಸೂಚಿ ಆಸ್ತಿಗಳು ನಮ್ಮ ಕುಟುಂಬದಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ವಿ ಎಚ್ ಶಿವರುದ್ರಪ್ಪ ಮತ್ತು ಅವರ ಇಬ್ಬರು ಹೆಂಡತಿಯರು ಜೀವಂತ ಇದ್ದ ಕಾಲಕ್ಕೆ ನನ್ನನ್ನು ದತ್ತಕ ನೀಡಿದ್ದ ಬಗ್ಗೆ ನೊಂದಾಯಿತ ದಾಖಲೆ ಇಲ್ಲ.

ನನ್ನನ್ನು ಈಶ್ವರಪ್ಪ ಎಂಬುವವರು ದತ್ತಕ ಪಡೆದಿದ್ದು ಅವರಿಗೆ ರುದ್ರಮ್ಮ ಮತ್ತು ಶಿವಗಂಗಮ್ಮ ಅಂತ ಇಬ್ಬರು ಹೆಂಡತಿಯರು ಇದ್ದರು, ಸದರಿ ಇಬ್ಬರು ಹೆಂಡತಿಯರಿಗೆ ಮಕ್ಕಳು ಇರಲಿಲ್ಲ. ಯಾವುದೇ ದತ್ತಕ ಶಾಸ್ತ್ರ ಪಾಲೀಸದೇ ಪಂಚಾಯಿತಿಯಲ್ಲಿ ಮಾತನಾಡಿ ನನ್ನನ್ನು ನನ್ನ ದತ್ತಕ ತಂದೆ ಕರೆದುಕೊಂಡು ಹೋಗಿದ್ದರು. ನನ್ನನ್ನು ದತ್ತಕ ನೀಡಿದ್ದ ಬಗ್ಗೆ ನಿರ್ದಿಷ್ಟ ದಿನಾಂಕ ಗೊತ್ತಿಲ್ಲ. ನಾನು ಹತ್ತು ವರ್ಷದವನಾಗಿದ್ದಾಗ ನನ್ನನ್ನು ದತ್ತಕ ನೀಡಲಾಗಿದೆ. ನನ್ನ ತಂದೆ ವಿ ಎಚ್ ಶಿವರುದ್ರಪ್ಪರವರಿಗೆ ಮೊದಲ ಹಿರಿಯ ಮಗನಾಗಿದ್ದ ಕಾರಣ ನನ್ನನ್ನು ದತ್ತಕ ನೀಡಿಲ್ಲ ಎಂದರೆ ಸರಿಯಲ್ಲ. ವಿ ಎಚ್ ಶಿವರುದ್ರಪ್ಪರವರಿಗು ಮತ್ತು ಈಶ್ವರಪ್ಪರವರಿಗೊ ಎಷ್ಟು ವರ್ಷಗಳ ವಯಸ್ಸಿನ ಅಂತರ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪರವರು ವಡ್ನಾಳು ಗ್ರಾಮದವರು. ನನ್ನನ್ನು ದತ್ತಕ ಪಡೆದ ಈಶ್ವರಪ್ಪರವರು ನನ್ನ ತಂದೆ ವಿ ಎಚ್ ಶಿವರುದ್ರಪ್ಪರವರ ತಮ್ಮ. ನನ್ನ ತಂದೆಗೆ ಈಶ್ವರಪ್ಪ ಒಬ್ಬನೇ ಸಹೋದರ ಮತ್ತು ಮೂರು ಜನ ಸಹೋದರಿಯರು.

ನನ್ನ ತಂದೆಯ ಸಹೋದರಿಯರು ಎಂದರೆ ಶಿವಲಿಂಗಮ್ಮ, ಸಿದ್ದಮ್ಮ. ಸಾಕ್ಷಿ ಮುಂದುವರೆಗೆ ತನ್ನ ತಂದೆಗೆ ಇಬ್ಬರು ಸಹೋದರಿಯರು ಮಾತ್ರ ಇದ್ದರು ಎಂದು ನುಡಿಯುತ್ತಾರೆ. ಈಶ್ವರಪ್ಪರವರ ಎರಡನೇ ಹೆಂಡತಿ ಶಿವಲಿಂಗಮ್ಮರವರು 2012-13 ರಲ್ಲಿ ಮರಣ ಹೊಂದಿದ್ದಾರೆ. ದಾವಾಸ್ತಿಗಳ ಖಾತೆಗಳು ಕಂದಾಯ ಇಲಾಖೆಯಲ್ಲಿ ಯ ಾವಾಗ ಯಾರ ಯಾರ ಹೆಸರಿಗೆ ಬದಲಾವಣಗೆ ಆಗಿವೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ನಾನು ಎಷ್ಟು ವಯಸ್ಸಿನವನಿದ್ದಾಗ ಮರಣ ಹೊಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ವ್ಯವಸಾಯದ ವೃತ್ತಿ ಬಿಟ್ಟು ಬೇರೆ ವೃತ್ತಿ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ವಿ ಎಚ್ ಶಿವರುದ್ರಪ್ಪರವರ ಮತ್ತು ಅವರ ಸಹೋದರ ಈಶ್ವರಪ್ಪರವರ ಮಧ್ಯೆ ನೋಂದಾಯಿತ ಪಾಲು ವಿಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿ ಎಚ್

**OS.No.**13/2019

ಡಿ**ಡಬ್ಲ್ಯೂ:1**

ಶಿವರುದ್ರಪ್ಪರವರ ಮತ್ತು ಅವರ ಸಹೋದರ ಈಶ್ವರಪ್ಪರವರ ಹೆಸರಿಗೆ ದಾವಾ ಆಸ್ತಿಗಳ ಕಂದಾಯ ದಾಖಲೆಗಳು ಇಲ್ಲ. ದಾವಾಸ್ತಿಗಳೆಲ್ಲವೂ ನನ್ನ ತಂದೆ ಶಿವರುದ್ದಪ್ಪರವರ ಹೆಸರಿಗೆ ಇದ್ದ ಆಸ್ತಿಗಳು ಎಂದರೆ ಸಾಕ್ಷಿ ದಾವಾ ಕ್ರಮ ಸಂಖ್ಯೆ 4 ಮತ್ತು 10 ಅ ಅನುಸೂಚಿ ಆಸ್ತಿಗಳನ್ನು ಹೊರುಪಡಿಸಿ ಎಂದು ನುಡಿಯುತ್ತಾರೆ.

ನನ್ನ ಚಿಕ್ಕಪ್ಪ ಈಶ್ವರಪ್ಪ ಮರಣ ಹೊಂದಿದ್ದಾರೆ. ಸದರಿ ಚಿಕ್ಕಪ್ಪರವರು ಸುಮಾರು 2001-02 ರಲ್ಲಿ ಮರಣ ಹೊಂದಿರಬಹುದು. ಸಾಕ್ಷಿ ಮುಂದುವರೆದು 2006 ರಲ್ಲಿ ಮರಣ ಹೊಂದಿದ್ದಾರೆ ಎಂದು ನುಡಿಯುತ್ತಾರೆ. ಈಶ್ವರಪ್ಪ ಮತ್ತು ಶಿವರುದ್ದಪ್ರವರ ಹೆಸರಿನಲ್ಲಿ ಇದ್ದ ಆಸ್ತಿಗಳು ಅವರವರಿಗೆ ವಿಭಾಗದ ಮೂಲಕ ಬಂದ ಆಸ್ತಿಗಳು ಎಂದರೆ ಸರಿ. ಈಶ್ವರಪ್ಪರವರ ಹೆಸರಿಗೆ ಇದ್ದ ಆಸ್ತಿಗಳ ದಾಖಲೆಗಳು ನನ್ನ ಹೆಸರಿಗೆ ಬದಲಾವಣೆ ಆಗಿಲ್ಲ ಎಂದರೆ ಸರಿ. ಈಶ್ವರಪ್ಪರವರ ಹೆಸರಿಗೆ ಇದ್ದ ಆಸ್ತಿಗಳು ಅವರ ಮರಣ ನಂತರ ಅವರ ಇಬ್ಬರು ಹೆಂಡತಿಯರಾದ ಶಿವಲಿಂಗಮ್ಮ ಮತ್ತು ರುದ್ರಮ್ಮ ರವರ ಜಂಟಿ ಹೆಸರಿನಲ್ಲಿ ಹಕ್ಕು ಬದಲಾವಣೆ ಆಗಿದೆ. ಹಾಗೆ 2007-08 ರಲ್ಲಿ ಹಕ್ಕು ಬದಲಾವಣೆ ಆಗಿದೆ. ಆ ಪೈಕಿ ಶಿವಲಿಂಗಮ್ಮರವರ ಮರಣ ನಂತರ ಪ್ರಸ್ತುತ ರುದ್ರಮ್ಮರವರ ಹೆಸರಿಗೆ ದಾಖಲೆಗಳು ಇವೆ. ಹಾಗೆ ಈಗ್ಗೆ 2 ವರ್ಷಗಳ ಹಿಂದೆ ಬದಲಾವಣೆ ಆಗಿವೆ. ಈಶ್ವರಪ್ಪರವರ ಮರಣ ನಂತರ ಅವರ ಹೆಸರಿಗೆ ಇದ್ದ ಆಸ್ತಿಗಳ ದಾಖಲೆಗಳು ಅವರ ಇಬ್ಬರು ಹೆಂಡತಿಯರು ಮತ್ತು ನನ್ನ ಜಂಟಿ ಹೆಸರಿಗೆ ಖಾತೆ ಪಹಣಿ ಆಗಿಲ್ಲ ಎಂದರೆ ಸರಿ.

ಸಮಯ ಆಗಿದ್ದ ಕಾರಣ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.